1074 ಶ್ರೀ ವಿಶ್ವನಾಥ್ ಎಸ್.ಆರ್. : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೀಲಗಿರಿ ಮರಗಳನ್ನು ಬೆಳೆಸುವುದನ್ನು ನಿಷೇಧಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಈ ನೀಲಗಿರಿ ಮರಗಳ ಸಾಕಾಣಿಕೆಯಿಂದ ಜಲಮಟ್ಟ, ಪರಿಸರ ಹಾಳಾಗುತ್ತಿದ್ದು, ಇದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಇಂತಹ ಯಾವುದೇ ಪ್ರಸ್ತಾವ ಸರ್ಕಾರದ ಮುಂದಿರುವುದಿಲ್ಲ.

ಆ) ನೀಲಗಿರಿ ಮರಗಳ ಸಾಕಾಣಿಕೆಯಿಂದ ಪರಿಸರಕ್ಕೆ ಪ್ರತಿಕೂಲ ಪರಿಣಾಮ ಉಂಟಾಗುತ್ತಿರುವ ಬಗ್ಗೆ ಯಾವುದೇ ನಿರ್ಣಯಾತ್ಮಕ ವೈಜ್ಞಾನಿಕ ಆಧಾರಗಳಿರುವುದಿಲ್ಲ. ಅರಣ್ಯ ಇಲಾಖೆಯು ಅರಣ್ಯ ಪ್ರದೇಶದಲ್ಲಿ ನೀಲಗಿರಿ ಮರಗಳನ್ನು ಬೆಳೆಸುತ್ತಿಲ್ಲ ಮತ್ತು ನೀಲಗಿರಿ ಸಸಿಗಳನ್ನು ರೈತರಿಗೆ ವಿತರಣೆ ಮಾಡುತ್ತಿಲ್ಲ.

1107 ಶ್ರೀ ಅಮರೇಶ್ (ಮುಳಬಾಗಿಲು) : ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಳಬಾಗಿಲು ಪುರಸಭೆಗೆ 2005–06ನೇ ಸಾಲಿನಿಂದ 2009–10ನೇ ಸಾಲಿನ ವರೆಗೆ ಯೋಜನೆವಾರು ಬಿಡುಗಡೆಯಾದ ಅನುದಾನವೆಷ್ಟು; ಬಳಕೆಯಾಗಿರುವ ಅನುದಾನವೆಷ್ಟು;

ಆ) ಅನುದಾನ ಸರಿಯಾಗಿ ಬಳಕೆಯಾಗದೇ ಇರುವುದು ಮತ್ತು ಕಾಮಗಾರಿಗಳ ಗುಣಮಟ್ಟ ಕಾಪಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ತಪ್ಪಿತಸ್ಥ ಅಧಿಕಾರಿಗಳು ಮತ್ತು ಗುತ್ತಿಗೆದಾರರ ಮೇಲೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು) :

ಅ) 2005–06ನೇ ಸಾಲಿನಿಂದ 2009–10ನೇ ಸಾಲಿನವರೆಗೆ ಯೋಜನೆವಾರು ಬಿಡುಗಡೆಗೊಳಿಸಲಾದ ಅನುದಾನ ಕೆಳಗಿನಂತಿರುತ್ತದೆ.

9-14

(ರೂ.ಲಕ್ಷಗಳಲ್ಲಿ)

ಕ್ರ ಸಂ	ಅನುದಾನ	ವರ್ಷ					ಒಟ್ಟು	ಬಳಕೆಯಾಗಿರುವ ಒಟ್ಟು ಅನುದಾನ
		05–06	06–07	07–08	08–09	09–10		
1	ಎಸ್ಎಫ್ಸಿ ಮುಕ್ತನಿಧಿ		121.58	221.56	216 80		559.94	519.00
2	ಎಸ್ಎಫ್ಸಿ ವಿಶೇಷ	103.07	100.00	712.98			916 05	793.00
3	12ನೇ ಹಣಕಾಸು	35.12	22.68	60.46	30.73		148.99	66.66
4	ಎಸ್ಜಿಎಸ್ ಆರ್ವೈ	3.02	4.04	11.62	12.65		33.33	21.81

ಆ) –ಇಲ್ಲ–

ಇ) ದೂರು ಬಂದಿದ್ದಲ್ಲಿ, ತಪಾಸಣೆಗೆ ಒಳಪಡಿಸಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕಾನೂನು ರೀತಿ ಕ್ರಮ ವಹಿಸಲಾಗುವುದು.

1059 ಶ್ರೀ ಸಿದ್ದು ಸವದಿ (ತೇರದಾಳ) : ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೇರದಾಳ, ರಬಕವಿ, ಬನಹಟ್ಟಿ ಮತ್ತು ಮಹಾಲಿಂಗಪುರ ಪಟ್ಟಣಗಳಲ್ಲಿ ಅಕ್ರಮವಾಗಿ ವಾಸವಾಗಿರುವ ಕುಟುಂಬಗಳ ಸಂಖ್ಯೆ ಎಷ್ಟು; ಎಷ್ಟು ಎಕರೆ ಪ್ರದೇಶ ಅಕ್ರಮವಾಗಿ ಅತಿಕ್ರಮವಾಗಿದೆ ಮತ್ತು ಯಾವ ಯಾವ ಇಲಾಖೆಗೆ ಸೇರಿದ ಜಮೀನಿನಲ್ಲಿ ಅತಿ ಕ್ರಮವಾಗಿದೆ;

ಆ) ಈ ಕುಟುಂಬಗಳು ಸುಮಾರು 25 ವರ್ಷಗಳಿಂದ ಅಲ್ಲಿ ಸಾವಿರಾರು ಎಕರೆ ಪ್ರದೇಶದಲ್ಲಿ ಪಕ್ಕಾ ಮನೆಗಳನ್ನು ಕಟ್ಟಿಕೊಂಡು ಇದ್ದರೆ, ಅವರೆಲ್ಲರಿಗೆ ಹಕ್ಕುಪತ್ರ ಕೊಡಲು ಇರುವ ತೊಂದರೆಗಳೇನು; ಹಾಗಿಲ್ಲದಿದ್ದಲ್ಲಿ, ಇದಕ್ಕೆ ಪರಿಹಾರವೇನು;

ಇ) ಈ ರೀತಿ ಅಕ್ರಮವಾಗಿ ಸ್ವಾಧೀನ ಪಡಿಸಿಕೊಂಡ ಆಸ್ತಿಗಳಿಂದ ನಗರಸಭೆಗಳಿಗೆ ಕೋಟ್ಯಾಧಿ ರೂಪಾಯಿಗಳು ಕರ ಹಾನಿಯಾಗುತ್ತಿದ್ದು, ಯಾವ ರೀತಿ ಸರಿಪಡಿಸಲಾಗುವುದು;